ಓ.ಎಸ್.ನಂಃ 236/2023

**ಪಿಡಬ್ಲ್ಯೂ-1**

**<u>ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 09.01.2026 ರಂದು ಪ್ರಮಾಣಿಕರಿಸಲಾಯಿತು.</u>**

**<u>ಪಾಟೀ ಸವಾಲು: 8 ಮತ್ತು 9ನೇ ಪ್ರತಿವಾದಿ ಪರ ವಕೀಲರಿಂದಃ</u>**

ನನಗೆ ಅಕ್ಕ ಮತ್ತು ತಂಗಿ ಇದ್ದಾರೆ. ನನ್ನ ತಂದೆಗೆ ಒಟ್ಟು ಮೂರು ಜನ ಮಕ್ಕಳು ಎಂದರೆ ಸರಿ. ನನ್ನ ಅಕ್ಕನ ಹೆಸರು ಸೌಭಾಗ್ಯ. ನನ್ನ ತಂಗಿ ಹೆಸರು ಕಲ್ಪನಾ. ದಾವ ಸ್ವತ್ತು ನನ್ನ ತಾತ ಪುಟ್ಟಪ್ಪ ಬಿನ್ ಮರಿಲಿಂಗಪ್ಪ ಎಂಬುವವರ ಹೆಸರಿಗೆ ಸರ್ವೇ ನಂಃ 32 ರಲ್ಲಿ 4 ಎಕರೆ ಮಂಜೂರಾಗಿತ್ತು. ನನ್ನ ತಾತನಿಗೆ ಸರ್ವೇ ನಂಃ 32 ರಲ್ಲಿ ಕೇವಲ 4 ಎಕರೆ ಮಂಜೂರಾಗಿತ್ತು ಎಂದರೆ ಸರಿ. ನನ್ನ ತಾತನಿಗೆ 4 ಜನ ಮಕ್ಕಳು. ಅವರ ಹೆಸರು ಗುರುಲಿಂಗಪ್ಪ, ಶಿವಪ್ಪ, ಚನ್ನಬಸಪ್ಪ ಮತ್ತು ತೋಟಪ್ಪ. ನನ್ನ ತಾತ ಮರಣ ಹೊಂದಿದ ನಂತರ ದಾವ ಸ್ವತ್ತು ಸಮಾನವಾಗಿ ನಾಲ್ಕು ಜನಕ್ಕೂ ಭಾಗವಾಗಬೇಕಿತ್ತು ಎಂದರೆ ಸಾಕ್ಷಿ ದಾವ ಸ್ವತ್ತನ್ನು ನಮಗೆ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ದಾವ ಸ್ವತ್ತು ನಮ್ಮ ಭಾಗಕ್ಕೆ ಬಂದಿದೆ ಎಂದು ತೋರಿಸಲು ದಾಖಲೆ ಇಲ್ಲ. 2023 ರಲ್ಲಿ ದಾವ ಸ್ವತ್ತಿನ ಮೌಲ್ಯ ರೂ.15 ಲಕ್ಷ ಇರಬಹುದು. ದಾವೆ ದಾಖಲಿಸುವ ಕಾಲಕ್ಕೆ ದಾವ ಸ್ವತ್ತಿನ ಮೌಲ್ಯ 15 ಲಕ್ಷ ಇತ್ತು ಎಂದರೆ ಸರಿ.

8 ಮತ್ತು 9ನೇ ಪ್ರತಿವಾದಿ ಎಕರೆ ರೂ.5 ಲಕ್ಷದಂತೆ ಕ್ರಯಕ್ಕೆ ಪಡೆದುಕೊಂಡಿದ್ದಾರೆ. ನಿಪಿ-6 ರಲ್ಲಿ ಸ್ವತ್ತಿನ ಮೌಲ್ಯ. ರೂ.20,40,000/- ಕ್ಕೆ ಖರೀದಿ ಮಾಡಿದ್ದಾರೆ ಎಂದರೆ ಸರಿ. ಕ್ರಯದ ಕಾಲಕ್ಕೆ ಖಾತಾ 1ನೇ ಪ್ರತಿವಾದಿ ಹೆಸರಿನಲ್ಲಿ ಇತ್ತು ಎಂದರೆ ಸರಿ. ಪ್ರತಿವಾದಿ 8 ಮತ್ತು 9 ದಾವ ಸ್ವತ್ತನ್ನು ಖರೀದಿ ಮಾಡುವ ಕಾಲಕ್ಕೆ 1ನೇ ಪ್ರತಿವಾದಿ ಹೆಸರಿಗೆ ದಾವ ಸ್ವತ್ತಿನ ದಾಖಲೆಗಳು ಕಾನೂನು ಬದ್ಧವಾಗಿ ದಾಖಲಾಗಿದ್ದವು ಎಂದರೆ ಸರಿ. 1ನೇ ಪ್ರತಿವಾದಿ ತಾತನಿಗೆ 4 ಎಕರೆ ಮಂಜೂರಾಗಿತ್ತು ಎಂದರೆ ಸರಿ. ಸದರಿ ಮಂಜೂರಿನಂತೆ 1ನೇ ಪ್ರತಿವಾದಿ ತಾತನ ಹೆಸರಿಗೆ ಖಾತಾ ನಮೂದಾಗಿತ್ತು ಎಂದರೆ ಸರಿ. ತದನಂತರ 1ನೇ ಪ್ರತಿವಾದಿಯ ತಂದೆ ಹೆಸರಿಗೆ ಖಾತಾ ಆಗಿತ್ತು ಎಂದರೆ ಸರಿ. ದಾವ ಸ್ವತ್ತನ್ನು 1ನೇ ಪ್ರತಿವಾದಿಯ ತಂದೆ 1ನೇ ಪ್ರತಿವಾದಿಗೆ ದಾನ ಪತ್ರ

ಬರೆದುಕೊಟ್ಟಿದ್ದರು ಎಂದರೆ ಸರಿ. ನಿಪಿ5 ಸದರಿ ದಾನ ಪತ್ರ ಎಂದರೆ ಸರಿ. 2023–ಮಾರ್ಚ್ ತಿಂಗಳಿನಲ್ಲಿ ಪ್ರತಿವಾದಿ 8 ಮತ್ತು 9 ರವರು ಕ್ರಯಕ್ಕೆ ಪಡೆದಿರುವುದು ತಿಳಿಯಿತು.

ಸರ್ವೇ ನಂಃ 32 ನನ್ನ ಮತ್ತು ನನ್ನ ಸೋದರಿಯರ ಹೆಸರಿನಲ್ಲಿ ಕಂದಾಯ ದಾಖಲೆಗಳು ನಮೂದಾಗಿದೆ ಎಂದರೆ ಸರಿ. ಸರ್ವೇ ನಂಃ 32 ರಲ್ಲಿ 4 ಎಕರೆಯನ್ನು ಹೊಡತುಪಡಿಸಿ ಬೇರೆ ಜಮೀನು ನಮಗೆ ಮಂಜೂರಾಗಿಲ್ಲ ಎಂದರೆ ಸರಿ. ಸಾಕ್ಷಿಗೆ ಸರ್ವೇ ನಂಃ 32 ರ ಆರ್.ಟಿ.ಸಿ ಯನ್ನು ತೋರಿಸಲಾಗಿ, ಅದನ್ನು ಒಪ್ಪಿಕೊಂಡ ಕಾರಣ, ಅದನ್ನು ನಿಡಿ–1 ಎಂದು ಗುರುತಿಸಲಾಯಿತು. ಬಸಮ್ಮ ನನ್ನ ತಾಯಿ. ಸರ್ವೇ ನಂಃ 32/ಪಿ77 ನನ್ನ ತಾಯಿ, ನನ್ನ ಸಹೋದರಿಯರು ಮತ್ತು ನನ್ನ ಹೆಸರಿಗೆ ಜಂಟಿ ಖಾತಾ ಆಗಿದೆ ಎಂದರೆ ಸರಿ. ಸಾಕ್ಷಿಗೆ ಸದರಿ ಎಂ.ಆರ್. ನ್ನು ತೋರಿಸಲಾಗಿ, ಅದನ್ನು ಒಪ್ಪಿಕೊಂಡ ಕಾರಣ, ಅದನ್ನು ನಿಡಿ–2 ಎಂದು ಗುರುತಿಸಲಾಯಿತು. ನನ್ನ ತಂದೆ 2009 ರಲ್ಲಿ ಮರಣ ಹೊಂದಿರುತ್ತಾರೆ. ನಂತರ ದಿಃ 17.06.2016 ರಲ್ಲಿ ನಿಡಿ–2 ರಂತೆ ನಮ್ಮ ಹೆಸರಿಗೆ ಪೌತಿ ಖಾತೆಯಾಗಿದೆ ಎಂದರೆ ಸರಿ. ದಾವ ಸ್ವತ್ತಿನ ಆರ್.ಟಿ.ಸಿ ಪ್ರತಿವಾದಿ 8 ಮತ್ತು 9 ರವರ ಹೆಸರಿಗೆ ನಮೂದಾಗಿದೆ ಎಂದರೆ ಸರಿ. ಪ್ರತಿವಾದಿ 8 ಮತ್ತು 9 ರವರು ಇಂದಿಗೂ ದಾವ ಸ್ವತ್ತಿಗೆ ಕಂದಾಯ ಕಟ್ಟಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ನಿಡಿ–2 ರ ಕಾಲಕ್ಕೆ ದಾವ ಸ್ವತ್ತು ನಮ್ಮದು ಎಂದು ನನಗೆ ಗೊತ್ತಿರಲಿಲ್ಲ.

**ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ, ಸಮಯ ನೀಡಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ